sdmimd

**Vijaya karnataka**

**Date:** March 26, 2016 **Page No.** 04

**Edition:** Mysuru **Language: Kannada**

# ನಿರಂತರ ಕಲಿಕೆಯಿಂದ ಹೊಸ ಅನ್ವೇಷಣೆ

## ಎಸ್‌ಡಿಎಂ ಘಟಿಕೋತ್ಸವದಲ್ಲಿ ಅರುಣ್ ಮೈರಾ ಅಭಿಮತ

**ವಿಕ ಸುದ್ದಿಲೋಕ**, ಮೈಸೂರು

ನಿರಂತರ ಕಲಿಕೆಗೆ ವಿದ್ಯಾರ್ಥಿಗಳು ಹೆಚ್ಚಿನ ಒತ್ತು ನೀಡುವ ಅಗತ್ಯವಿದೆ ಎಂದು ಯೋಜನಾ ಆಯೋಗದ ಮಾಜಿ ಸದಸ್ಯ ಅರುಣ್ ಮೈರಾ ತಿಳಿಸಿದರು.

ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಎಸ್‌ಡಿಎಂ-ಐಎಂಡಿಯಲ್ಲಿ ಶುಕ್ರವಾರ ಆಯೋಜಿಸಿದ್ದ 21ನೇ ಘಟಿಕೋತ್ಸವದಲ್ಲಿ ಅವರು ಘಟಿಕೋತ್ಸವ ಭಾಷಣ ಮಾಡಿದರು.

''ಹೊಸ ಜ್ಞಾನ, ತಂತ್ರಜ್ಞಾನವನ್ನು ಕಲಿಯುವುದು ನಿರಂತರವಾಗಿರಬೇಕು. ಕಲಿಕೆಯ ಮೂಲಕ ವಿದ್ಯಾರ್ಥಿಗಳು ಹೊಸ ಅನ್ವೇಷಣೆ ಮಾಡಲು ಸಾಧ್ಯವಾಗುತ್ತದೆ. ಉತ್ತಮ ನಾಯಕನಾಗುವ ದೃಷ್ಟಿಯಿಂದ ಕಲಿಕೆಯಲ್ಲಿ ಆಸಕ್ತಿ ಹೊಂದಿರುವುದು ಬಹಳ ಅಗತ್ಯ'' ಎಂದು ಹೇಳಿದರು.

''ಮಾನವನ ಬದುಕಿನಲ್ಲಿ ಕಲಿಕೆ ಮತ್ತು ಬದುಕುವಿಕೆಯನ್ನು ಎಂದಿಗೂ ಬೇರ್ಪಡಿಸಲು ಸಾಧ್ಯವಿಲ್ಲ. ಮನುಷ್ಯನ ದೇಹ ನಿರ್ಜೀವವಾದಾಗ ಮಾತ್ರ ಕಲಿಯುವಿಕೆ ಎನ್ನುವುದು ನಿಂತು ಹೋಗುತ್ತದೆ. ಕಾಲೇಜಿನಲ್ಲಿ ಅಧ್ಯಾಪಕರ ನೆರವಿನಿಂದ ಕಲಿಯುತ್ತಿದ್ದ ವಿದ್ಯಾರ್ಥಿಗಳು ಪದವಿ ಪಡೆದ ಬಳಿಕ ಸ್ವತಂತ್ರವಾಗಿ ಕಲಿಯಬೇಕಾಗುತ್ತದೆ. ಜೀವನದ ಯಶಸ್ಸಿನ ದೃಷ್ಟಿಯಿಂದ ಕಾಲೇಜಿನಲ್ಲಿ ಕಲಿತ ಪ್ರಮಾಣ ಕ್ಕಿಂತ ಹೆಚ್ಚಿನ ಕಲಿಕೆಯಲ್ಲಿ ವಿದ್ಯಾರ್ಥಿಗಳು ಪದವಿ ಪಡೆದ ಬಳಿಕ ತೊಡಗಿಸಿಕೊಳ್ಳುವುದು ಬಹಳ ಮುಖ್ಯ'' ಎಂದರು.

''ವಿದ್ಯಾರ್ಥಿಗಳು ಕಲಿಕೆಯ ಜೊತೆಗೆ ಆಲಿಸುವುದು ಬಹಳ ಮುಖ್ಯ. ನಾಯಕರು ಯಾವಾಗಲೂ ಇತರರ ಸಮಸ್ಯೆಯನ್ನು ಆಲಿಸುವ ಯತ್ನ ಮಾಡುತ್ತಾರೆ. ಅಂತೆಯೇ ಪ್ರಜೆಗಳು ಪರಸ್ಪರ ಆಲಿಸುವುದು ಬಹಳ ಮುಖ್ಯ'' ಎಂದು ಹೇಳಿದರು.

''ವಿದ್ಯಾರ್ಥಿಗಳು ಸಾಮಾನ್ಯವಾಗಿ ಅಪರಿಚಿತರನ್ನು ತಮ್ಮ ಶತ್ರು ಎನ್ನುವಂತೆ ಭಾವಿಸುತ್ತಾರೆ. ಈ ರೀತಿಯ ಮನೋಭಾವ ಸರಿಯಲ್ಲ. ಅಪರಿಚಿತರನ್ನು ಸ್ನೇಹಿತರನ್ನಾಗಿ ಮಾಡಿಕೊಂಡು ಅವರ ಜೊತೆ ಕೆಲಸ ಮಾಡಿ ಪ್ರಪಂಚವನ್ನು ಇನ್ನಷ್ಟು ಸುಂದರ ಮಾಡುವುದು ಮುಖ್ಯ'' ಎಂದು ಹೇಳಿದರು.

''ವಿದ್ಯಾರ್ಥಿಗಳು ಮಾತನಾಡುವ ಕಲೆಯನ್ನು ರೂಢಿಸಿಕೊಳ್ಳಬೇಕು. ಮಾತಿನಲ್ಲಿ ಯಾವುದೇ ರೀತಿಯ ನೋವು ಉಂಟಾಗದಂತೆ ಎಚ್ಚರ ವಹಿಸಬೇಕು. ಸಾಮಾಜಿಕ ತಾಣಗಳಲ್ಲಿ ನಾವು ಇಷ್ಟ ಪಟ್ಟವರೊಂದಿಗೆ ಮಾತ್ರ ಮಾತನಾಡುತ್ತೇವೆ. ಎಲ್ಲರ ಜೊತೆ ಸಂವಹನ ಮಾಡುವುದನ್ನು ಕಲಿಯಬೇಕಿದೆ'' ಎಂದರು.

''ಶಿಕ್ಷಣ ಸಂಸ್ಥೆಗಳು ವೈವಿಧ್ಯತೆಯನ್ನು ಪೋಷಿಸಬೇಕಿದೆ. ಮಾತನಾಡುವ ಕಲೆಯನ್ನು ಹೇಳಿ ಕೊಡಬೇಕಿದೆ. ಅವುಗಳು ವಿದ್ಯಾರ್ಥಿಗಳಿಗೆ ವಿಷಯಗಳನ್ನು ಆಲಿಸುವುದನ್ನು ಹೇಳಿ ಕೊಡಬೇಕಿದೆ'' ಎಂದು ಹೇಳಿದರು.

ಎಸ್‌ಡಿಎಂಐಎಂಡಿ ಅಧ್ಯಕ್ಷ ಡಾ.ಡಿ.ವೀರೇಂದ್ರ ಹೆಗ್ಗಡೆ ಮಾತನಾಡಿ, ''ದೇಶದ ಆರ್ಥಿಕ ಬೆಳವಣಿಗೆಯನ್ನು ಶೇ.7.8ರಷ್ಟು ನಿರೀಕ್ಷೆ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಉತ್ತಮ ತರಬೇತಿ ಹೊಂದಿದ ತಂತ್ರಜ್ಞರು, ನಿರ್ವಹಣಾ ತಜ್ಞರಿಗೆ ದೇಶದಲ್ಲಿ ಸಾಕಷ್ಟು ಬೇಡಿಕೆ ಕಂಡು ಬರಲಿದೆ. ವಿದ್ಯಾರ್ಥಿಗಳು ಶಿಕ್ಷಣ ಸಂಸ್ಥೆಯ ಒಳ್ಳೆಯ ರಾಯಭಾರಿಯಾಗಿ ಕೆಲಸ ಮಾಡಬೇಕು'' ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಒಟ್ಟು 170 ವಿದ್ಯಾರ್ಥಿಗಳಿಗೆ ಪಿಜಿಡಿಎಂ ಪದವಿ ಪ್ರದಾನ ಮಾಡಲಾಯಿತು. 2014-16ನೇ ಸಾಲಿನ ಪಿಜಿಡಿಎಂ ವಿದ್ಯಾರ್ಥಿ ಕೃತಿ ಶುಕ್ಲಾ ಅವರು 3 ಚಿನ್ನದ ಪದಕ, ನೀತೂ ಪ್ರಭಾಕರನ್ ಅವರು 2 ಚಿನ್ನದ ಪದಕ ಪಡೆದರು. ಎಸ್‌ಡಿಎಂಐಎಂಡಿ ನಿರ್ದೇಶಕ ಡಾ.ಎನ್.ಆರ್.ಪರಶುರಾಮನ್, ಉಪ ನಿರ್ದೇಶಕಿ ಡಾ.ಎಚ್.ಗಾಯತ್ರಿ ಇತರರು ಇದ್ದರು.

ವಿಕ ಚಿತ್ರಲೋಕ



ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಎಸ್‌ಡಿಎಂ-ಐಎಂಡಿಯಲ್ಲಿ ಶುಕ್ರವಾರ ಆಯೋಜಿಸಿದ್ದ 21ನೇ ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳು ಅತಿಥಿಗಳಾದ ಅರುಣ್ ಮೈರಾ, ಡಾ.ಡಿ.ವೀರೇಂದ್ರ ಹೆಗ್ಗಡೆ, ಡಾ.ಎನ್.ಆರ್.ಪರಶುರಾಮನ್ ಜತೆ.